# ಕೋವಿಡ್ ನಂತರ ಶಾಲೆಗಳಲ್ಲಿ ಸಾಮಾಜಿಕ ಒಡನಾಟ

ಸಾರಿಯಾ ಆಲಿ

***

ನನ್ನ ಪಾಲಿಗೆ ಶಾಲೆಯು ಪ್ರಯತ್ನರಹಿತ ಸಂಬಂಧಗಳನ್ನು ಅಭಿವೃದ್ಧಿಪಡಿಸಿಕೊಳ್ಳುವುದಕ್ಕೆ ಶಕ್ತಿಯುತ ತಾಣವೆನಿಸಿದೆ. ತುಂಬಾ ಶಿಸ್ತಿನ ಶಿಕ್ಷಕರ ವಿರುದ್ಧ ಫಿತೂರಿ ಹೂಡುವುದಕ್ಕಾಗಿ, ಪ್ರಾಜೆಕ್ಟ್ ಕೆಲಸವನ್ನು ಒಟ್ಟಿಗೆ ಮಾಡಿ, ಒಟ್ಟಿಗೆ ಊಟ ಮಾಡಿ ಅಥವಾ ವಿಲಕ್ಷಣ, ಕಾಲ್ಪನಿಕ ವಿಚಾರಗಳನ್ನು ಹಂಚಿಕೊಳ್ಳುವ ಮೂಲಕ ನಮ್ಮ ಗೆಳೆತನವು ಪ್ರಾರಂಭಗೊಂಡಿದ್ದನ್ನು ಮರೆಯುವಂತಿಲ್ಲ. ಸಾಕಷ್ಟು ಜನರಿಗೆ ಗೆಳೆತನವು ಜೀವನ ಪರ್ಯಂತ ಉಳಿಯುತ್ತದೆ. ಆದರೆ ಇಂದಿನ ಶಾಲಾ ಮಕ್ಕಳು ಕೋವಿಡ್-19 ಸೋಂಕಿನ ಕಾರಣ ಅನಿರೀಕ್ಷಿತ ಪ್ರತ್ಯೇಕೀಕರಣವನ್ನು ಅನುಭವಿಸುತ್ತಿದ್ದಾರೆ. ಪ್ರತ್ಯೇಕೀಕರಣದ ಈ ದಿನಗಳು, ಅವುಗಳು ಸೃಷ್ಟಿಸಿರುವ ಅಂತರ, ಹಾಗೂ ಇಷ್ಟೊಂದು ದೀರ್ಘ ಅಂತರದ ನಂತರದ ಒಡನಾಟ ಮತ್ತು ಕಲಿಕೆಯ ಸಕ್ರಿಯ ತಾಣಗಳಾಗಿ ಕೋವಿಡ್ ನಂತರ ಅಥವಾ ಶಾಲೆಗಳು ಪುನರಾರಂಭಗೊಂಡಾಗ ಶಾಲೆಗಳು ವಹಿಸಲಿರುವ ಪಾತ್ರಗಳನ್ನು ಗಮನದಲ್ಲಿಟ್ಟುಕೊಂಡು ಈ ಲೇಖನವನ್ನು ಬರೆಯಲಾಗಿದೆ.

ನನ್ನ  ಕಲಿಕೆ ಮುಗಿದ ಐದು ವರ್ಷಗಳ ನಂತರ ರಾಜಸ್ಥಾನದ ಬಾರ್ಮರ್‌ನಲ್ಲಿರುವ ಸಣ್ಣ ಸರ್ಕಾರಿ ಪ್ರಾಥಮಿಕ ಶಾಲೆಯ ವಾತಾವರಣದೊಳಗೆ  ನನಗೆ ಆತ್ಮೀಯವಾಗಿ ಬೆರೆಯುವ ಅವಕಾಶ ದೊರೆಯಿತು.  ಅಜೀಂ ಪ್ರೇಮ್‌ಜಿ ಫೌಂಡೇಶನ್‌ನ ಎಸೋಸಿಯೇಟ್ ಪ್ರೋಗ್ರಾಂನ ಕಡ್ಡಾಯ ಶಾಲಾ ಅಭ್ಯಾಸದ ಭಾಗವಾಗಿ ಸುಮಾರು ನಾಲ್ಕು ತಿಂಗಳುಗಳ ಕಾಲ ಶಾಲೆಯ ಸೀಮಿತ ಸಂಖ್ಯೆಯ ಮಕ್ಕಳೊಂದಿಗೆ ನಾನು ತೊಡಗಿಸಿಕೊಂಡಿದ್ದೆ. ಈ ತೊಡಗಿಸಿಕೊಳ್ಳುವಿಕೆಯ ಮೂಲಕ ಶಾಲೆಯಲ್ಲಿ ನಡೆಯುವ  ಸಮಾಜ ವಹಿಸುವ ಪಾತ್ರವನ್ನು ಆಳವಾಗಿ ಅರ್ಥ ಮಾಡಿಕೊಳ್ಳಲು ನನಗೆ ಸಾಧ್ಯವಾಯಿತು. ಬಾರ್ಮರ್ ಜಾತಿ ಆಧರಿತ ಜಿಲ್ಲೆಯಾಗಿದ್ದು,  ಜನರು ಇದರ ಬಗ್ಗೆ ಸ್ಪಷ್ಟ ನಿಲುವು ತಳೆದಿದ್ದಾರೆ. ಇಲ್ಲಿನ ಸ್ಥಳೀಯರು ಮೊದಲ ಭೇಟಿಯಲ್ಲೇ ನಿಮ್ಮ ಜಾತಿಯನ್ನು ತಿಳಿದುಕೊಳ್ಳುತ್ತಾರೆ.

ಅಲ್ಲದೆ ಬಾರ್ಮರ್ ವಿರಳ ಜನಸಂಖ್ಯೆ (ಮುಖ್ಯವಾಗಿ ಗ್ರಾಮೀಣ ಭಾಗಗಳಲ್ಲಿ) ಹೊಂದಿರುವ ಜಿಲ್ಲೆಯಾಗಿದ್ದು, ಸಾಕಷ್ಟು ಅಂತರದಲ್ಲಿ ಇರುವ ಕೇರಿಗಳಲ್ಲಿ (ಢಾಣಿಗಳು) ಸಣ್ಣ ಸಮೂಹಗಳಾಗಿ ಜನ ವಾಸಿಸುತ್ತಾರೆ. ಸಾಮಾಜಿಕ ಪ್ರೇರಕ ಶಕ್ತಿಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಜಾತಿ ಮತ್ತು ಕೇರಿ

(ಥಾಣಿ) ವ್ಯವಸ್ಥೆ ಹೇಗೆ ಚಾಲ್ತಿಗೆ ಬಂದವು ಎನ್ನುವುದನ್ನು ಅರಿತುಕೊಳ್ಳಬಹುದು. ಪ್ರತಿ ಕೇರಿಯು (ಥಾಣಿ) ಒಂದು ಜಾತಿಯನ್ನು ಮಾತ್ರ ಹೊಂದಿರುತ್ತದೆ. ಇಂತಹ ಸಾಮಾಜಿಕ ವ್ಯವಸ್ಥೆಯಲ್ಲಿ, ಸಾಮುದಾಯಿಕ ಅಭಿಮಾನ, ಎಲ್ಲಾ ಚಿಂತನೆಗಳು ಮತ್ತು ಸಂಸ್ಕೃತಿಯ ಹಿರಿಮೆ ಅಂತರ್ಗತವಾಗಿರುವಾಗ ಮಕ್ಕಳು ಸಹ ಇದನ್ನು ಬಲವಾಗಿ ಗ್ರಹಿಸುತ್ತಾರೆ. ಅವರು ಏನನ್ನು ನೋಡುತ್ತಾರೆ ಹಾಗೂ ಏನನ್ನು ಕೇಳುತ್ತಾರೋ, ಅಂತಿಮವಾಗಿ ಸಮಾಜದ ಬಗ್ಗೆಯೂ ಅದನ್ನೇ ಕಲಿಯುತ್ತಾರೆ.

ಸಮುದಾಯ ಮಾದರಿಯ ನಿಯಂತ್ರಣವನ್ನು ಮುರಿದು ಕೇರಿಯ ಹೊರಗಡೆ ಮೊದಲ ಬಾರಿಗೆ ಹೆಜ್ಜೆ ಇಡುವ ತಾಣ ಶಾಲೆಯಾಗಿದೆ. ವಿಸ್ತೃತ ಸಮಾಜದಲ್ಲಿರುವ ವೈವಿಧ್ಯತೆಗಳಿಗೆ ಮಗುವನ್ನು ಒಡ್ಡಲು ಮತ್ತು ಇಂತಹ ಸ್ಥಳದಲ್ಲಿ ವಾಸಿಸುವುದನ್ನು ಕಲಿಯಲು ಇದೊಂದು ವೇದಿಕೆಯಾಗಿದೆ. ಇದೇ ವೇಳೆ, ಶಾಲೆಯು, ಇತರ ಜಾತಿಗಳು ಅಥವಾ ಧರ್ಮಗಳ ಜನರತ್ತ ಮಕ್ಕಳು ಹೊಂದಿರುವ ಸಾಂಪ್ರದಾಯಿಕ ಮನೋಭಾವಗಳ ವರ್ತನೆಯು ಪ್ರತಿಫಲಿಸುವ ತಾಣವೂ ಆಗಿದೆ. ಹೀಗಾಗಿ, ಶಾಲೆಗಳು ಮಕ್ಕಳಲ್ಲಿ ಇರುವ ಯಾವುದೇ ರೀತಿಯ ಪ್ರತ್ಯೇಕತಾವಾದ ಮತ್ತು ತಾರತಮ್ಯವನ್ನು ಹೋಗಲಾಡಿಸಲು ಪ್ರಜ್ಞಾಪೂರ್ವಕವಾಗಿ ಪ್ರಯತ್ನಿಸಬೇಕು.

**ಕೋವಿಡ್ ನಂತರ ಪರಿಸ್ಥಿತಿ ಹೇಗಿರಲಿದೆ?**

ಶಾಲೆಯೊಳಗಿನ ಸಮಾಜೋ-ಆರ್ಥಿಕ ಆಚರಣೆಗಳನ್ನು ಮುರಿಯುವುದು ಕಷ್ಟದ ಕೆಲಸವಾದರೂ ಇದು ಕಡ್ಡಾಯವಾಗಿದೆ ಉದಾಹರಣೆಗೆ, ಮಧ್ಯಾಹ್ನದ ಬಿಸಿಯೂಟಕ್ಕೆ (ಎಂಡಿಎಂ) ಮೇಲ್ಜಾತಿಯ ಮಕ್ಕಳು ತಮ್ಮದೇ ಪಾತ್ರೆಗಳನ್ನು ತರುವುದನ್ನು ಶಾಲೆಯು ನಿಷೇಧಿಸಿ ಮಕ್ಕಳಿಗೆ ಈ ಹೊಸ ಕಲಿಕೆಯನ್ನು ಪ್ರಾರಂಭಿಸಿದರೆ ಇಂತಹ ಅಭ್ಯಾಸವನ್ನು ತೊಡೆದು ಹಾಕಬಹುದು. ದುರದೃಷ್ಟವಶಾತ್, ಒಂದು ವರ್ಷಕ್ಕೂ ಹೆಚ್ಚಿನ ದೀರ್ಘ ವಿರಾಮವು ಮಕ್ಕಳನ್ನು ತಮ್ಮ ಮನೆಗಳಲ್ಲಿ ಬಂಧಿಸಿಟ್ಟಿದೆ ಮಾತ್ರವಲ್ಲದೆ ಮನೆಯೊಳಗಿನ ಪ್ರತಿ ಚರ್ಚೆಯನ್ನು ಅವರು ಗ್ರಹಿಸುವಂತೆ ಮಾಡಿದೆ. ದುರದೃಷ್ಟವಶಾತ್, ಈ ಸಾಂಕ್ರಾಮಿಕ ರೋಗವು ಕೆಲವೊಂದು ಸಮುದಾಯಗಳ ವಿರುದ್ಧ ವಿವಿಧ ಪೂರ್ವಗ್ರಹಗಳು ಜನರ ದೃಷ್ಟಿಕೋನದ ಒಳಹೊಕ್ಕು ಬಿಟ್ಟಿವೆ. ಇಂತಹ ಸಂದರ್ಭದಲ್ಲಿ, ಶಾಲೆಗಳು ಮಾಮೂಲಿಯಾಗಿ ಕಾರ್ಯಾರಂಭ ಮಾಡಿದಾಗ, ಇತರ ಮಕ್ಕಳ ಜೊತೆಗೆ ವ್ಯವಹರಿಸುವಾಗ ಅವರ ವರ್ತನೆಯು ಹೇಗಿರಬಹುದು ಎಂಬುದನ್ನು ಊಹಿಸಲು ಆಗದು. ದೀರ್ಘ ಕಾಲದ ನಂತರ ತಮ್ಮ ಗೆಳೆಯರನ್ನು ಭೇಟಿಯಾಗುವುದರಿಂದ ಆಟದ ವೇಳೆ, ಮಧ್ಯಾಹ್ನದ ಊಟ ಅಥವಾ ಪರಸ್ಪರರ ನೋಟ್ ಪುಸ್ತಕಗಳನ್ನು ನಕಲು ಮಾಡಿಕೊಳ್ಳುವಾಗ ಶಾಲಾ ನೆನಪುಗಳನ್ನು ಆನಂದಿಸುವ,

ಉತ್ಸಾಹದ ಕಾರಣದಿಂದ ಇದು ಧನಾತ್ಮಕವಾಗಿರಬಹುದು. ಇನ್ನೊಂದೆಡೆ, ಶಾಲೆಗೆ ಬರುವ ಮಕ್ಕಳಲ್ಲಿ ಇರುವ ಭೀತಿಯ ಕಾರಣ. ಇದು ಋಣಾತ್ಮಕವಾಗಿಯೂ ಇರಬಹುದು. ಇದು ವೈರಾಣುವಿಗೆ ತುತ್ತಾಗುವುದು ಅಥವಾ ನಿರ್ದಿಷ್ಟ ಸಮುದಾಯದ ಜನರಿಂದ ಸಾಮಾಜಿಕ ಅಂತರ ಕಾಪಾಡುವ ಕುರಿತಾಗಿರಬಹುದು. ಎರಡನೆಯ ಭೀತಿಯನ್ನು ಸಮುದಾಯ ತರಗತಿಗಳ ವೇಳೆ ಕ್ಷೇತ್ರಕಾರ್ಯದಲ್ಲಿ ನಾನು ಗಮನಿಸಿದೆ. ನಿಗದಿತ ಸಮುದಾಯದ ವ್ಯಕ್ತಿಯೊಬ್ಬ ಪಕ್ಕದಲ್ಲಿ ಹಾದು ಹೋದಾಗ ಮಗುವೊಂದು (ತರಗತಿಯೊಳಗೆ ಮಾಸ್ಕ್ ಧರಿಸಲು ಆ ಮಗುವಿಗೆ ಆಗಾಗ್ಗೆ ನೆನಪಿಸಬೇಕಿತ್ತು) ತಕ್ಷಣವೇ ಮಾಸ್ಕ್ ಧರಿಸುವಂತೆ ತನ್ನ ಸಹಪಾಠಿಗಳಿಗೆ ಎಚ್ಚರಿಕೆ ನೀಡಿತು.

ಆಕೆಯ ಪಕ್ಷಪಾತ ಧೋರಣೆಯನ್ನು  ತಿಳಿಯಲು ಅವಳೊಂದಿಗೆ ಸುದೀರ್ಘ ಸಂಭಾಷಣೆ ನಡೆಸಿದೆ. ನಮ್ಮ ದೇಶದಲ್ಲಿ ಕೊರೊನಾ ವೈರಸ್ ಹರಡಲು ಆ ನಿರ್ದಿಷ್ಟ ಸಮುದಾಯವೇ ಕಾರಣ ಹಾಗೂ ನಾವು ಅವರ ಕುರಿತು ಎಚ್ಚರಿಕೆಯಿಂದ ಇರಬೇಕು ಎಂದು ಆಕೆ ವಿವರಿಸಿದಳು. ಆಕೆಯ ಪೋಷಕರು ಈ ರೀತಿ ಚರ್ಚಿಸುವುದನ್ನು ಆಕೆ ಕೇಳಿಸಿಕೊಂಡಿದ್ದಳು. ಕೋವಿಡ್ ನಂತರ ಈ ಸಮಸ್ಯೆ ಉಂಟಾಗಬಹುದು. ಇದು, ರೋಗ ಹರಡುವ ಸಾಧ್ಯತೆಯ ಕಾರಣ ಸಮುದಾಯದಿಂದ ಅಂತರ ಕಾಪಾಡುವಂತೆ ಮಾಡಲಿದೆ ಮಾತ್ರವಲ್ಲದೆ ನಿರ್ದಿಷ್ಟ ಜಾತಿ ಅಥವಾ ಧರ್ಮದ ವಿರುದ್ಧ ಸಮುದಾಯಗಳ ತಾರತಮ್ಯಭರಿತ ಸಮರ್ಥನೆಗಳನ್ನು ಗಟ್ಟಿಗೊಳಿಸಲಿದೆ.

ಈ ಸಮಸ್ಯೆಗೆ ಮತ್ತೊಂದು  ಮಗ್ಗುಲು ಇದೆ. ಪ್ರಾಥಮಿಕ ಶಾಲೆಗಳು ಸೀಮಿತ ವೈವಿಧ್ಯತೆಯ ಜನಸಂಖ್ಯೆಗೆ ಸೇವೆ ಒದಗಿಸಿದರೆ, ಮಾಧ್ಯಮಿಕ ಮತ್ತು ಪ್ರೌಢ ಶಾಲೆಗಳು ಜಾತಿ ಮತ್ತು ಧರ್ಮದ ಅಧಿಕ ವೈವಿಧ್ಯತೆಯನ್ನು ಹೊಂದಿವೆ. ಈ ಪಿಡುಗಿನ ಸಂದರ್ಭದಲ್ಲಿ ತರಗತಿಯಿಂದ ತರಗತಿಗೆ ಭಡ್ತಿ ನೀಡಿರುವ ಕಾರಣ ಮಕ್ಕಳು ಎರಡು ತರಗತಿಗಳಷ್ಟು ಮುಂದೆ ಇದ್ದಾರೆ. ಐದನೇ ತರಗತಿಯಲ್ಲಿದ್ದ ಮಗು ಈಗ ಏಳನೇ ತರಗತಿಯಲ್ಲಿದೆ. ಅಂದರೆ, ಶಾಲೆ ಪುನರಾರಂಭಗೊಳ್ಳುವಾಗ ಮಗುವು ಮೇಲಿನ ತರಗತಿ ಹಾಗೂ ಹೆಚ್ಚು ವಿವಿಧತೆಯಿಂದ ಕೂಡಿದ ಶಾಲೆಯಲ್ಲಿ ಕಲಿಯಲಿದೆ. ಇಂತಹ ಸನ್ನಿವೇಶದಲ್ಲಿ ಶಾಲೆಯ ಪೂರ್ವಸಿದ್ಧತೆಯು ಕ್ರಿಯಾತ್ಮಕ ವಿಧಾನದಿಂದ ಕೂಡಿರಬೇಕು. ಮೊದಲನೆಯದಾಗಿ, ಎಳೆಯ ಮಕ್ಕಳು ಊಹಿಸಲಾಗದ ರೀತಿಯಲ್ಲಿ ವರ್ತಿಸಬಹುದು. ಏಕೆಂದರೆ ಅವರು ದೀರ್ಘ ಕಾಲದವರೆಗೆ ಸಂಶಯಗ್ರಸ್ತ, ಗೊಂದಲದ ಅವಧಿಯಲ್ಲಿ ಬದುಕಿದ್ದಾರೆ ಎಂಬುದನ್ನು ಶಾಲೆಗೆ ಸಂಬಂಧಿಸಿದ ಎಲ್ಲಾ ಫಲಾನುಭವಿಗಳು ಅರಿತುಕೊಂಡು ಸಂವೇದನೆಯಿಂದ ಹಾಗೂ ತಾಳ್ಮೆಯಿಂದ ವರ್ತಿಸಬೇಕು.

ಎರಡನೆಯದಾಗಿ, ಕಡ್ಡಾಯ ದೈಹಿಕ ಅಂತರವು ನೈಜ ಸಾಮಾಜಿಕ ಅಂತರವಲ್ಲ ಎನ್ನುವುದನ್ನು ಖಚಿತಪಡಿಸುವುದಕ್ಕಾಗಿ, ಕೆಲವು ಮಕ್ಕಳು ಮಾತಿನ ಮೂಲಕ ಅಥವಾ ಕ್ರಿಯೆಯ ಮೂಲಕ ವ್ಯಕ್ತಪಡಿಸುವ, ಸಾಮಾಜಿಕ ತಾರತಮ್ಯ ಹೊಂದಿರುವ ಯಾವುದೇ ರೀತಿಯ ವರ್ತನೆ ಕಂಡುಬಂದಾಗ ಶಾಲೆಯು ಮಧ್ಯಪ್ರವೇಶ ಮಾಡಬೇಕು. ಮಧ್ಯಪ್ರವೇಶ ಮಾಡುವುದು ಎಂದರೆ ಬೈಯ್ಯುವುದಲ್ಲ. ಬದಲಾಗಿ ಮಕ್ಕಳಲ್ಲಿ ಹೊಸ ದೃಷ್ಟಿಕೋನ ಮತ್ತು ಕಲಿಕೆಯನ್ನು ಸ್ವಾಗತಿಸುವ ಚಟುವಟಿಕೆಗಳಾದ, ಕಥೆಗಳು, ನಾಟಕ ಮತ್ತು ಚರ್ಚೆಗಳ ಮೂಲಕ, ನೈತಿಕತೆಯನ್ನು ಬಿಂಬಿಸುವ ಸಂವಾದ ಅಥವಾ ಅಭಿಪ್ರಾಯಗಳ ಮೂಲಕ ಇದನ್ನು ನೆರವೇರಿಸಬೇಕು. ಕೊನೆಯದಾಗಿ, ಯಾವುದೇ ಒಂದು ಸಮುದಾಯ ಅಥವಾ ಆಚರಣೆಯ ವಿರುದ್ಧ ಈ ಪಿಡುಗಿನ ಅವಧಿಯಲ್ಲಿ ರೂಪುಗೊಂಡಿರಬಹುದಾದ ಯಾವುದೇ ಅವೈಜ್ಞಾನಿಕ ಸುಳ್ಳುಗಳನ್ನು ತೊಡೆದು ಹಾಕುವುದಕ್ಕಾಗಿ ಸಮುದಾಯದ ಸದಸ್ಯರ ಜೊತೆಗೆ ಶಾಲೆಯು ಒಡನಾಟವನ್ನು ಹೆಚ್ಚಿಸಬೇಕು. ಈ ಕೆಲಸಗಳು ಸವಾಲಿನಿಂದ ಕೂಡಿವೆ. ಏಕೆಂದರೆ ಸುಮಾರು ಎರಡು ವರ್ಷಗಳಿಂದ ನೆಲೆಯೂರಿರುವ ಪೂರ್ವಗ್ರಹಗಳನ್ನು ತೊಡೆದು ಹಾಕುವುದು ಸುಲಭವಲ್ಲ. ಆದರೆ ಜಾತಿ ಮತ್ತು ಧರ್ಮ ತಾರತಮ್ಯವು ಭವಿಷ್ಯದ ನಾಗರಿಕರನ್ನು ಆವರಿಸದಂತೆ ತಡೆಯುವಲ್ಲಿ ಶಾಲೆಗಳು ಪ್ರಮುಖ ಪಾತ್ರ ವಹಿಸಬಲ್ಲವು.

ಇಲ್ಲಿ ಉಲ್ಲೇಖಿಸಲಾಗಿರುವ ಸಮಸ್ಯೆ ಮತ್ತು ಇದರ ಪರಿಹಾರವು ಸಾಂದರ್ಭಿಕ ಕಾಳಜಿಯಂತೆ ಕಾಣಬಹುದು. ಆದರೆ ಇದೇ ರೀತಿ ಪರ ಮತ್ತು ವಿರೋಧದ ನಿರೂಪಣೆಗಳನ್ನು ತಲೆಮಾರಿನಿಂದ ತಲೆಮಾರಿಗೆ ಹಸ್ತಾಂತರಿಸಲಾಗುತ್ತದೆ. ಯಾವುದೇ ರೀತಿಯ ದ್ವೇಷ ಬಿತ್ತುವಿಕೆ ಮತ್ತು ತಪ್ಪು ದಾರಿಗೆ ಎಳೆಯುವ ವಿಚಾರಗಳನ್ನು ಸಮರ್ಥವಾಗಿ ಎದುರಿಸಬೇಕು. ಪಿಡುಗು ಕಾಣಿಸಿಕೊಂಡ ನಂತರ ಮೊದಲ ಬಾರಿಗೆ ಶಾಲೆಯ ಮೂಲಕ ಸಾರ್ವಜನಿಕ ಸ್ಥಳಕ್ಕೆ ಕಾಲಿಡುತ್ತಿರುವ ಮಕ್ಕಳು ಅವರ ಎರಡು ವರ್ಷಗಳ ಎಲ್ಲಾ ಕಲಿಕೆಯನ್ನು ಹೊರಗೆಡಹುತ್ತಾರೆ. ಹೀಗಾಗಿ ಸೂಕ್ತ ಮಾರ್ಗದರ್ಶನ ನೀಡುವ ಜವಾಬ್ದಾರಿ ಶಿಕ್ಷಕರ ಮೇಲಿದೆ. ನಿಜ ಹೇಳುವುದಾದರೆ, ಸಾಮಾಜಿಕ ಒಡನಾಟದ ಗುಣವೈಶಿಷ್ಟ್ಯವನ್ನು, ಯಾರಾದರೂ ವ್ಯಕ್ತಿಗಳ ವಿರುದ್ಧ ಮಕ್ಕಳು ಹೊಂದಿರುವ ತಪ್ಪು ಗ್ರಹಿಕೆಗಳನ್ನು ಸರಿಪಡಿಸುವುದಕ್ಕಾಗಿ ಅನುಕೂಲಕರವಾಗಿ ಬಳಸಿಕೊಳ್ಳಬಹುದು. ಕೊನೆಯದಾಗಿ, ಶಾಲೆಗಳ ಪುನರಾರಂಭವನ್ನು, ಮಕ್ಕಳು ಮತ್ತು ಸಮುದಾಯಕ್ಕೆ ಸರಿಯಾದ ಸಂದೇಶವನ್ನು ನೀಡುವುದಕ್ಕಾಗಿ ಸಾಮಾಜಿಕ ಸಾಮರಸ್ಯವನ್ನು ಮರುಸ್ಥಾಪಿಸುವ ಭರವಸೆಯ ತಾಣವಾಗಿ ಪರಿಗಣಿಸಬಹುದು.

***

**ಸಾರಿಯಾ ಆಲಿ** ಅವರು ರಾಜಾಸ್ಥಾನದ ಅಜೀಂ ಪ್ರೇಮ್‌ಜಿ ಫೌಂಡೇಶನ್‌ನ ಎಸೋಸಿಯೇಟ್ ಆಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಅವರು ಬೆಂಗಳೂರಿನ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದಿಂದ ಅಭಿವೃದ್ಧಿಯಲ್ಲಿ ಎಂಎ ಮತ್ತು ದೆಹಲಿ ವಿಶ್ವವಿದ್ಯಾಲಯದ ಮಿರಾಂಡಾ ಹೌಸ್‌ನಿಂದ ತತ್ವಶಾಸ್ತ್ರದಲ್ಲಿ ಬಿಎ ಪದವಿ ಪಡೆದಿದ್ದಾರೆ. ಮಕ್ಕಳು ತಾವಾಗಿಯೇ ಯೋಚಿಸಲು ಅನುವು ಮಾಡಿಕೊಡುವ, ಸಾಕ್ಷರತೆಗಿಂತ ಮಿಗಿಲಾದ ಕಲಿಕೆ ಮತ್ತು ಶಿಕ್ಷಣದಲ್ಲಿ ಅವರು ದೃಢ ವಿಶ್ವಾಸ ಹೊಂದಿದ್ದಾರೆ. ಅವರನ್ನು sariya.ali@azimpremjifoundation.org ಮೂಲಕ ಸಂಪರ್ಕಿಸಬಹುದು.